## ಕಳೆದ ಸಂಚಿಕೆಯಲ್ಲಿ



ಪ್ರಿಯಾಂಕಾ ಅಗರ್ವಾಲ್ ಗುಂಗಿನಲ್ಲಿದ್ದ ಆಸ್ಕರ್ ವೈಲ್ಡ್‌ನನ್ನು ಅಂಜಲಿಯ ಕರೆ ಎಚ್ಚರಿಸಿತು. ಅವಳು ಮುಂಬಯಿಗೆ ಬರುವವಳಿದ್ದಳು. ಬಹಳ ದಿನಗಳ ನಂತರ ಮತ್ತೆ ಕರೆ ಮಾಡಿದ ಪೂರ್ವಿಕಾ, ಲಂಡನ್ ಪ್ರವಾಸಕ್ಕೆ ಆಹ್ವಾನಿಸಿದಳು. ಪಿಎಚ್‌ಡಿ ಎನ್‌ರೋಲ್‌ಮೆಂಟ್ ನೆಪ ಹೇಳಿ ವೈಲ್ಡ್ ನಿರಾಕರಿಸಿದ. ಇಬ್ಬರ ಅಭಿರುಚಿಗಳು ಭಿನ್ನವಾಗಿರುವುದರಿಂದ ತಾವು ಒಟ್ಟಿಗೆ ಬಾಳುವುದು ಸಾಧ್ಯವಾಗಲಾರದೆಂದು ಪೂರ್ವಿಕಾ ಹೇಳಿದ್ದು ಅವನಿಗೆ ನೋವನ್ನೇನೂ ಉಂಟು ಮಾಡಿರಲಿಲ್ಲ. ಗೊಂದಲದಲ್ಲಿ ಮುಳುಗಿದ್ದವನು ಗೆಳೆಯನ ಆಹ್ವಾನದ ಮೇರೆಗೆ ಅವನ ಡಾನ್ಸ್ ಬಾರ್‌ಗೆ ಹೋದ. ಅಲ್ಲಿನ ಜಗತ್ತು ಅವನನ್ನು ಬೆರಗುಗೊಳಿಸಿತ್ತು. ಸೋಲೊ ಡಾನ್ಸರ್ ಬೃಂದಾ ಅವನ ಗಮನಸೆಳೆದಳು. ಬೃಂದಾಳ ಪರಿಚಯ ಆಸ್ಕರ್ ವೈಲ್ಡ್‌ಗೆ ಮುಂಬಯಿಯ ಬಡವರು ಹಾಗೂ ಜನಸಾಮಾನ್ಯರ ಜೀವನವನ್ನು ಪರಿಚಯಿಸಿತು. ಅವಳ ತಂದೆ ಲಿವರ್ ಸಮಸ್ಯೆಯಿಂದ ಆಸ್ಪತ್ರೆಯಲ್ಲಿದ್ದ. ಅಪ್ಪನ ಚಿಕಿತ್ಸೆಗೆ ಹಣ ಹೊಂಚಲು ಬೃಂದಾ ಡಾನ್ಸ್ ಬಾರ್‌ನಲ್ಲಿ ನರ್ತಿಸುತ್ತಿದ್ದಳು, ಬೆಳಗಿನ ವೇಳೆ ಕಾಲೇಜಿನಲ್ಲಿ ಲೆಕ್ಚರರ್ ಆಗಿ ಪಾಠ ಮಾಡುತ್ತಿದ್ದಳು. ಅವಳ ಬದುಕಿನ ಕಥೆ ಆಸ್ಕರ್‌ನನ್ನು ಭಾವುಕಗೊಳಿಸಿತು.

‘ಬೇಡ, ಅಷ್ಟೊಂದು ಹಣವನ್ನು ಮತ್ತೆ ಹಿಂತಿರುಗಿಸುವ ಶಕ್ತಿ ನಮಗಿಲ್ಲ’ ಅವಳು ತಕ್ಷಣ ಹೇಳಿದ್ದಳು.

‘ನೀವು ಹಿಂತಿರುಗಿಸುವುದೇನೂ ಬೇಡ’ ತಣ್ಣಗೆ ಹೇಳಿದ್ದನವನು.

‘ಈಗ ತಾನೇ ನಿಮ್ಮ ಗೆಳೆತನ ಆಗಿದೆ, ಸ್ನೇಹವನ್ನು ಯಾವುದೇ ಕಾರಣಕ್ಕೂ ದುರುಪಯೋಗಪಡಿಸಿಕೊಳ್ಳಬಾರದು.’

ಅವಳು ಮಾತುಗಳು ಮೆಚ್ಚುಗೆಯಾಗಿದ್ದವು ಅವನಿಗೆ. ಏಕೋ ಎಲ್ಲಾ ವಿಷಯಗಳನ್ನೂ ಅವಳ ಬಳಿ ಹಂಚಿಕೊಳ್ಳಬೇಕೆನಿಸಿತು ಆಸ್ಕರ್ ವೈಲ್ಡನಿಗೆ. ತನಗೆ ಬಿದ್ದ ಕನಸು, ತಾತ ಗುನ್ನಾಲಾಲನಿಗೂ ತನಗೂ ಇರುವ ಅಟ್ಯಾಚ್ಮೆಂಟ್, ಹೈಸ್ಕೂಲಿನಲ್ಲಿಯೇ ಡ್ರಗ್ಸ್ ಕೇಸಿನಲ್ಲಿ ಸಿಕ್ಕಿಬಿದ್ದಿದ್ದು, ಅಂಜಲಿ ದೇಸಾಯಿ, ಸಾಯಿಪ್ರಭೆ, ಪೂರ್ವಿಕಾ ದೇಶಪಾಂಡೆ, ಮೈಥಿಲಿ, ಪ್ರಿಯಾಂಕಾ ಅಗರ್ವಾಲ್ ಇವರೆಲ್ಲರ ಸ್ನೇಹ ಮತ್ತು ಒಡನಾಟ, ಡಾಕ್ಟರ್ ಮನೋರಂಜನಿಯವರೊಡನೆ ಆದ ಭೇಟಿ, ಮಾಥ್ಯೂ ಅಲೆಗ್ಸಾಂಡರನೊಂದಿಗೆ ಕಾಮಾಟಿಪುರದಲ್ಲಿ ಸುತ್ತಿದ್ದು... ಎಲ್ಲವನ್ನೂ ಚಾಚೂ ಬಿಡದೆ ಅವಳ ಮುಂದೆ ಪ್ರಾಮಾಣಿಕವಾಗಿ ಅನಾವರಣಗೊಳಿಸಿದ್ದ. ಅಷ್ಟೊತ್ತಿಗೆ ಊಟ ಮುಗಿದಿತ್ತು. ಅವನ ಇಲ್ಲಿಯವರೆಗಿನ ಕಥಾನಕವನ್ನು ಕೇಳಿ ಬೃಂದಾ ರಾಠೋಡ್ ಭಾವುಕಳಾಗಿದ್ದಳು. ಅವಳ ಕಣ್ಣುಗಳಲ್ಲಿ ತೆಳ್ಳನೆಯ ನೀರು ಕಾಣಿಸಿಕೊಂಡಿತ್ತು. ಮನಸ್ಸಿನೊಂದಿಗೆ ಅವಳ ಹೃದಯವೂ ಕರಗಿತ್ತು.

‘ಓ ಮೈ ಗಾಡ್, ಎಂಥಾ ಅಪರೂಪದ ಕಥೆ ನಿಮ್ಮದು’ ಎನ್ನುವ ಮಾತುಗಳು ಮೃದುವಾಗಿ ಅವಳ ಬಾಯಿಂದ ಹೊರಬಿದ್ದಿದ್ದವು. ಈಗ ಆಸ್ಕರ್ ವೈಲ್ಡ್ ಅವಳ ಬಗೆಗಿನ ಅಭಿಪ್ರಾಯವನ್ನು ತಿಳಿಸುತ್ತಾ ಒಪ್ಪಿದರೆ ಅವಳನ್ನು ಮದುವೆಯಾಗುವುದಾಗಿ ತನ್ನ ಬಯಕೆಯನ್ನು ಮುಂದಿಟ್ಟ.

‘ಬೇಡ ಆಸ್ಕರ್, ನನ್ನ ನಿನ್ನ ನಡುವೆ ಎಲ್ಲಾ ರೀತಿಯಲ್ಲೂ ಅಜಗಜಾಂತರ ವ್ಯತ್ಯಾಸವಿದೆ. ಅಂತರ ಜಾಸ್ತಿಯಾದಂತೆ ಸಂಬಂಧ, ಸಂವೇದನೆಗಳಿಗೆ ಧಕ್ಕೆ ಬರಬಹುದು. ಅಲ್ಲದೆ ನೀನು ನನಗಿಂತಲೂ ಒಂದು ವರ್ಷ ಚಿಕ್ಕವನು’ ಅವಳ ಮಾತುಗಳಲ್ಲಿ ನವಿರಾದ ಆತಂಕ ಮನೆಮಾಡಿತ್ತು. ಅವಳು ಇದ್ದಕ್ಕಿದ್ದಂತೆ ಏಕವಚನದಲ್ಲಿ ಮಾತನಾಡಿದ್ದು ಅವನಲ್ಲಿ ರೋಮಾಂಚನವನ್ನು ಉಂಟುಮಾಡಿತ್ತು. ಏಕವಚನ ಆತ್ಮೀಯತೆಯ ಸಂಕೇತ.

‘ನೀನು ಮಾರ್ಕ್ಸ್ ವಾದದ ಬಗ್ಗೆ ಮಾತನಾಡುತ್ತೀಯ, ನಾವು ಸಮಾನತೆಯ ಕಡೆ ಹೋಗಲು ಪ್ರಯತ್ನಿಸಬಾರದೇಕೆ? ಇನ್ನು ನಾನು ನಿನಗಿಂತಲೂ ಒಂದು ವರ್ಷ ಚಿಕ್ಕವನಾಗಿರುವುದು ದೊಡ್ಡ ಸಂಗತಿಯೇನೂ ಅಲ್ಲ. ತೆಂಡೂಲ್ಕರ್ ತನಗಿಂತಲೂ ಆರು ವರ್ಷ ದೊಡ್ಡವಳಾದ ಡಾಕ್ಟರ್ ಅಂಜಲಿಯನ್ನು ಮದುವೆಯಾಗಿಲ್ಲವೆ? ಅವರು ಖುಷಿಯಿಂದ ಬದುಕನ್ನು ಸವೆಸುತ್ತಿಲ್ಲವೆ?’ ಎಂದು ತಾನೂ ಅವಳನ್ನು ಏಕವಚನದಲ್ಲಿ ಸಂಬೋಧಿಸುತ್ತಾ ಮಾತುಗಳಿಗೆ ಸಡಗರವನ್ನು ತುಂಬಿದ್ದ. ಅವಳು ಅವನ ವಿನಯ ತುಂಬಿದ ಮಾತು, ನಯವಾದ ನಡವಳಿಕೆ ಮತ್ತು ಮನದಲ್ಲಿ ಯಾವ ವಿಷಯವನ್ನೂ ಮುಚ್ಚಿಡದೆ ಅನಾವರಣಗೊಳಿಸುವ ಗುಣ ಎಲ್ಲವನ್ನೂ ಬಹಳವಾಗಿ ಮೆಚ್ಚಿದಳು. ಆಸ್ಕರ್ ವೈಲ್ಡ್ ಅವಳಿಗೆ ಬಹಳವಾಗಿ ಇಷ್ಟವಾದ. ಅವಳು ಅವನಿಗೆ ಸೋತಳು. ಸೋಲುತ್ತಾ ಗೆಲ್ಲುವುದು ಯಾವಾಗಲೂ ಒಂದು ಅನನ್ಯ ಅನುಭೂತಿ. ಅವನ ಇಚ್ಛೆಗೆ ತನ್ನ ಸಂಪೂರ್ಣ ಸಮ್ಮತಿಯನ್ನು ಸೂಚಿಸಿದಳು. ಅವನು ಖುಷಿಯಾದ. ಅವಳನ್ನು ರಾತ್ರಿ ಹತ್ತು ಗಂಟೆಗೆ ಲೀಲಾವತಿ ಆಸ್ಪತ್ರೆಯ ಬಳಿ ಇಳಿಸಿ ಅವನು ಮನೆಯ ದಾರಿ ಹಿಡಿದ. ಅವನಲ್ಲಿ ಹಿಂದೆಂದೂ ಇಲ್ಲದ ಖುಷಿ, ಉಲ್ಲಾಸ, ಉತ್ಸಾಹ, ಸಂಭ್ರಮ, ಸಡಗರ ತುಂಬಿಕೊಂಡಿದ್ದವು. ಬೃಂದಾ ರಾಠೋಡಳಲ್ಲೂ ಇಂಥಾದ್ದೇ ಸಂಭ್ರಮ ಮನೆಮಾಡಿತ್ತು. ಇದಾದ ಹದಿನೈದು ದಿನಗಳಲ್ಲಿ ಬೃಂದಾ ರಾಠೋಡ್ ತಂದೆ ಪರುಶರಾಮ್ ರಾಠೋಡನಿಗೆ ಲಿವರ್ ಟ್ರಾನ್ಸ್‌ಪ್ಲಾಂಟ್ ಸರ್ಜರಿ ಯಶಸ್ವಿಯಾಗಿ ಆಗಿತ್ತು. ಆರೋಗ್ಯ ಸುಧಾರಿಸಿ ಆಸ್ಪತ್ರೆಯಿಂದ ಬಿಡುಗಡೆಯಾಗಿ ಮಾತುಂಗದ ತನ್ನ ಮನೆಯಲ್ಲಿ ಇದ್ದ. ಬೃಂದಾ ರಾಠೋಡ್ ಎಲ್ಲಾ ವಿಷಯಗಳನ್ನು ಅಪ್ಪ, ಅಮ್ಮನಲ್ಲಿ ತಿಳಿಸಿದ್ದಳು.

* * *

ಆಸ್ಕರ್ ವೈಲ್ಡ್ ನಡೆದ ಸಂಗತಿಗಳನ್ನು ತನ್ನ ತಾತ ಗುನ್ನಾಲಾಲನಲ್ಲಿ ತಿಳಿಸಿದ್ದನಲ್ಲದೆ ಬೃಂದಾಳನ್ನು ಮದುವೆಯಾಗುವ ತನ್ನ ನಿರ್ಧಾರವನ್ನು ಕೂಡ ವ್ಯಕ್ತಪಡಿಸಿದ್ದ. ಈ ವಿಷಯ ಮನೆಯಲ್ಲಿ ಚರ್ಚೆಯಾಗಿ ಎಲ್ಲರೂ ಅವನ ನಿರ್ಧಾರವನ್ನು ಸಮ್ಮತಿಸಿದರು. ಮದುವೆಯ ವಿಷಯದ ಬಗ್ಗೆ ಯಾರ ಅಭಿಪ್ರಾಯವನ್ನೂ ಕೇಳಕೂಡದೆಂದು ಆಸ್ಕರ್ ವೈಲ್ಡ್ ಷರತ್ತು ವಿಧಿಸಿದ. ಗುನ್ನಾಲಾಲನಿಗೂ ಆ ಬಗ್ಗೆ ಯಾವುದೇ ಜ್ಯೋತಿಷಿಯನ್ನಾಗಲೀ, ಪುರೋಹಿತನನ್ನಾಗಲೀ ಭೇಟಿಯಾಗಿ ಚರ್ಚಿಸಬೇಕೆನಿಸಲಿಲ್ಲ. ವರ್ತಮಾನದ ಕ್ಷಣಗಳನ್ನು ಯಾರಿಂದಲೂ ಬದಲಿಸಲಿಕ್ಕೆ ಆಗುವುದಿಲ್ಲ ಹಾಗೂ ಭೂಮಿಯ ಮೇಲೆ ನಡೆಯುವ ಪ್ರತಿಯೊಂದು ಸಂಗತಿ ಕೂಡ ಪೂರ್ವ ನಿರ್ಧರಿತವಾಗಿರುತ್ತವೆ ಎಂಬ ಸಂದೀಪ್ ಕೊಚಾರನ ಮಾತುಗಳು ಗುನ್ನಾಲಾಲನ ಮನಸ್ಸಿನಲ್ಲಿ ಭದ್ರವಾಗಿ ನೆಲೆಯೂರಿದ್ದವು. ಬಡವರ ಮನೆಯ ಕಲಿತ ಹೆಣ್ಣಾದರೆ ಮನೆಯಲ್ಲಿ ಎಲ್ಲರೊಂದಿಗೂ ಸರಿಹೊಂದಿಕೊಂಡು ಹೋಗುತ್ತಾಳೆಂದು ವೈಲ್ಡನ ತಾಯಿ ಅಹಲ್ಯಾ ದೇವಿಗೂ ಸಮಾಧಾನವಾಗಿತ್ತು. ಇನ್ನು ತಂದೆ ಭವರ್ ಲಾಲನಿಗೆ ಹುಡುಗಿ ಅರ್ಥಶಾಸ್ತ್ರದ ವಿದ್ಯಾರ್ಥಿನಿಯೆಂದು ತುಂಬಾನೇ ಖುಷಿಯಾಗಿತ್ತು. ಕಂಪನಿಯ ವ್ಯವಹಾರಗಳಲ್ಲಿ ಮುಂದೆ ಆಸ್ಕರ್ ವೈಲ್ಡನಿಗೆ ಬಹಳವೇ ಸಹಾಯವಾಗುತ್ತದೆಂಬುದು ಅವನ ಖುಷಿಗೆ ಕಾರಣವಾಗಿತ್ತಲ್ಲದೆ, ಕಂಪನಿಗೆ ಅವಳನ್ನೇ ಸಿಇಒ ಮಾಡಬೇಕೆಂಬ ಆಲೋಚನೆ ಕೂಡ ಮೂಡಿತ್ತು. ಮದುವೆಯನ್ನು ಆದಷ್ಟು ಬೇಗನೆ ಮಾಡಿ ಮುಗಿಸಬೇಕೆಂಬುದು ಮನೆಯಲ್ಲಿ ಎಲ್ಲರ ಇರಾದೆಯಾಗಿತ್ತು. ಮೊದಲು ತಾನು ಒಬ್ಬನೇ ಹೋಗಿ ಹುಡುಗಿಯ ಮನೆಯನ್ನು ನೋಡಿಕೊಂಡು ಬರುವುದಾಗಿ ಗುನ್ನಾಲಾಲ್ ನಿಶ್ಚಯಿಸಿದ. ಬೃಂದಾಳ ಅಡ್ರೆಸ್ ಪಡೆದುಕೊಂಡು ಗುನ್ನಾಲಾಲ್ ಮಾತುಂಗದ ಅಡ್ರೆಸ್‌ಗೆ ಹೊರಟ. ಮಾತುಂಗ ಅವನಿಗೆ ಅತ್ಯಂತ ಪರಿಚಯದ ಜಾಗವೇ ಆಗಿತ್ತು. ಅವನು ಮಫತ್ಲಾಲ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಧಾರಾವಿಯನ್ನು ಬಿಟ್ಟ ಮೇಲೆ ಮಾತುಂಗದ ಏರಿಯಾದಲ್ಲಿ ಐದು ವರ್ಷಗಳ ಕಾಲ ವಾಸವಿದ್ದ. ಅಡ್ರೆಸ್ ಹುಡುಕುವುದು ಕಷ್ಟವೇನೂ ಆಗಲಿಲ್ಲ. ಅದು ರಫಿ ಅಹಮದ್ ಕಿದ್ವಾಯ್ ರಸ್ತೆಯಲ್ಲಿರುವ ಸೋಬಾನಿಯ ರಿದ್ಧಿಸಿದ್ಧಿ ಅಪಾರ್ಟ್‌ಮೆಂಟ್. ಎಂಟನೆಯ ಮಹಡಿಯ ಡಬ್ಬಲ್ ಬೆಡ್ ರೂಮ್ ಫ್ಲಾಟಿನ ಕಾಲಿಂಗ್ ಬೆಲ್ ಒತ್ತಿದ ನಿಮಿಷದಲ್ಲಿ ಐವತ್ತು ವರ್ಷ ವಯಸ್ಸಿನ ಹೆಂಗಸೊಬ್ಬರು ಬಾಗಿಲು ತೆರೆದಿದ್ದರು. ಗುನ್ನಾಲಾಲ್ ಆಸ್ಕರ್ ವೈಲ್ಡನ ರೆಫರೆನ್ಸ್ ಕೊಟ್ಟು ತನ್ನ ಪರಿಚಯವನ್ನು ಹೇಳಿಕೊಂಡ. ಆ ಹೆಂಗಸು ಕಣ್ಣರಳಿಸಿದಳು ಖುಷಿಯಿಂದ.